ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು- 560001

ಸಂಖ್ಯೆ: ಸಿ3(7) ಪ್ರಾಶಾಶಿ. ಅಂ.ಘ. ಕೋ.ವರ್ಗಾವಣೆ/01/2021-22 ದಿನಾಂಕ: 31/01/2022

**: ಪರಸ್ಪರ ವರ್ಗಾವಣಾ ಕೌನ್ಸಿಲಿಂಗ್ ಪರಿಷ್ಕೃತ ವೇಳಾಪಟ್ಟಿ :**

ವಿಷಯ: 2020-21ನೇ ಸಾಲಿನ ಅಂತರ್ ಘಟಕ ವಿಭಾಗ ಹೊರಗಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ **ಪರಸ್ಪರ ವರ್ಗಾವಣೆಯನ್ನು** ಜೂಮ್ ಸಭೆಯ ಮೂಲಕ ವರ್ಚುಯಲ್(ಆನ್‌ಲೈನ್)ನಲ್ಲಿ ಗಣಕೀಕೃತ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ದಿನಾಂಕ: 03/02/2022 ರಂದು ನಡೆಸುವ ಬಗ್ಗೆ:

ಉಲ್ಲೇಖ:1 ಮಾನ್ಯ ಆಯುಕ್ತರ ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಜ್ಞಾಪನ ಸಂಖ್ಯೆ: ಶಿ.ವ.ಕೋಶ.ಸಾ.ವ/01/2020-21 ದಿನಾಂಕ: 25/11/2021.

2. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 ರ ಸಂಖ್ಯೆ:: ಇಪಿ 08/ಇಟಿಆರ್ 2020 ದಿನಾಂಕ: 09/07/2020.
3. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 17/12/2021.
4. ಈ ಕಛೇರಿ ಪತ್ರ ಸಂಖ್ಯೆ: ಶಿ.ವ ಕೋಶ.ಸಾ.ವ/01/2020-21 ದಿನಾಂಕ: 13/01/20222
5. ಈ ಕಛೇರಿಯಜ್ಞಾಪನ ಸಂಖ್ಯೆ:ಶಿ.ವ.ಕೋಶ.ಸಾ.ವ/01/2020-21 ದಿನಾಂಕ: 19/01/2022.

-----*****-----

ವಿಷಯದನ್ವಯ 2020-21ನೇ ಸಾಲಿನ ಅಂತರ್‌ಘಟಕ ವಿಭಾಗದ ಹೊರಗಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಪರಸ್ಪರ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಹಮ್ಮಿಕೊಳ್ಳಲು ಉಲ್ಲೇಖ (5) ರಲ್ಲಿ ಪರಿಷ್ಕೃತ ವೇಳಾಪಟ್ಟಿಯನ್ನು ಹೊರಡಿಸಿದೆ. ಅದರಂತೆ ದಿನಾಂಕ: 11/11/2020ರ ಅಧಿಸೂಚನೆಯನುಸಾರ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಅಂತರ್‌ಘಟಕ ವಿಭಾಗದ ಹೊರಗಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರು/ದೈಹಿಕ ಶಿಕ್ಷಕರು/ವಿಶೇಷ ಶಿಕ್ಷಕರುಗಳ ಪರಸ್ಪರ ವರ್ಗಾವಣೆ ಕೌನ್ಸಿಲಿಂಗ್‌ನ್ನು ದಿನಾಂಕ: 03/02/2022 ರಂದು ಈ ಕೆಳಕಂಡ ವೇಳಾಪಟ್ಟಿಯಂತೆ ಜೂಮ್ ಸಭೆಯ ಮೂಲಕ ವರ್ಚುಯಲ್(ಆನ್‌ಲೈನ್)ನಲ್ಲಿ ನಡೆಸಲಾಗುವುದು.

ಅಂತಿಮ ಆದ್ಯತಾ ಕೌನ್ಸಿಲಿಂಗ್ ಪಟ್ಟಿಯಲ್ಲಿರುವ ಶಿಕ್ಷಕರು ದಿನಾಂಕ: 03/02/2022 ರಂದು ಪರಸ್ಪರ ವರ್ಗಾವಣಾ ಮೂಲ ಅರ್ಜಿ ಹಾಗೂ ಆದ್ಯತೆಯ ಮೂಲ ದಾಖಲೆಗಳೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಇಬ್ಬರು ಶಿಕ್ಷಕರುಗಳು ಯಾವ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೋ ಆಯಾ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಕಛೇರಿಯಲ್ಲಿ ಹಾಜರಾಗುವುದು ಹಾಗೂ ಏಕಕಾಲದಲ್ಲಿ ವರ್ಚುಯಲ್(ಆನ್‌ಲೈನ್) ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ.

ಇಬ್ಬರೂ ಶಿಕ್ಷಕರು ಏಕಕಾಲದಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯ ಉಪನಿರ್ದೇಶಕರ ಕಛೇರಿಯಲ್ಲಿ ಹಾಜರಾಗಿ ವರ್ಗಾವಣಾ ಕೌನ್ಸಿಲಿಂಗ್ ತಂತ್ರಾಂಶದಲ್ಲಿ ಒಪ್ಪಿಗೆ ಸೂಚಿಸಿದ್ದಲ್ಲಿ ಮಾತ್ರ ವರ್ಗಾವಣಾ ಆದೇಶ ಜಾರಿಗೊಳಿಸಲಾಗುವುದು. ಇಬ್ಬರು ಶಿಕ್ಷಕರಲ್ಲಿ ಯಾರಾದರೂ ಒಬ್ಬರು ಗೈರುಹಾಜರಾದಲ್ಲಿ ಅಂತಹಾ ಪ್ರಕರಣವನ್ನು ಗೈರುಹಾಜರಿ ಎಂದು ಪರಿಗಣಿಸಲಾಗುವುದು. ನಂತರ ಯಾವುದೇ ಅಹವಾಲು ಸಲ್ಲಿಕೆಗೆ ಆಸ್ಪದವಿರುವುದಿಲ್ಲ.

**ಅಂತರ್ ಘಟಕ-ವಿಭಾಗದ ಹೊರಗಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆ (as on 11/11/2020)**

| ಕ್ರ.ಸಂ | ದಿನಾಂಕ | ಸಮಯ | ಹುದ್ದೆಯ ವಿವರ | ಆದ್ಯತಾಕ್ರಮ ಸಂಖ್ಯೆ ಯಿಂದ - ರವರೆಗೆ | ಷರಾ |
|---|---|---|---|---|---|
| 1 | 03-02-2022 | ಅಪರಾಹ್ನ 12-00 ಗಂಟೆಯಿಂದ | ಸಹಶಿಕ್ಷಕರು | 01 - 89 | |

**ವಿಶೇಷ ಸೂಚನೆ:**

1. ಕೌನ್ಸಿಲಿಂಗ್ ಅರ್ಹತಾ ಪಟ್ಟಿಯಲ್ಲಿರುವ ಶಿಕ್ಷಕರು ಮಾತ್ರ ಆದ್ಯತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆಯಂತೆ ದಿನಾಂಕ : 03/02/2022 ರಂದು ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತ ಸಮಯಕ್ಕೆ ಕೌನ್ಸಿಲಿಂಗ್‌ಗೆ ಸಂಬಂಧಿಸಿದ ಉಪನಿರ್ದೇಶಕರ ಕಛೇರಿಗೆ ಹಾಜರಾಗತಕ್ಕದ್ದು.

2. ಶಿಕ್ಷಕರು ಕೌನ್ಸಿಲಿಂಗ್‌ಗೆ ಹಾಜರಾಗುವಾಗ ತಮ್ಮ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ ಹಾಜರಾಗುವುದು.
3. ವರ್ಗಾವಣೆ ಅರ್ಜಿಯಲ್ಲಿಕೋರಿರುವ ಆಧ್ಯತೆಗೆ ಸಂಬಂಧಿಸಿದಂತೆ ಪೂರಕ ಮೂಲ ದಾಖಲೆಗಳನ್ನು ಹಾಜರು ಪಡಿಸುವುದು.
4. ಪರಸ್ಪರ ವರ್ಗವಣೆಯ ಪೂರಕ ದಾಖಲೆಗಳನ್ನು ಹಾಜರುಪಡಿಸುವುದು.
5. ಕೋವಿಡ್–19 ನಿಯಮಗಳನ್ನು ಪಾಲಿಸಿ ಕಡ್ಡಾಯವಾಗಿ ಮಾಸ್ಕ್ ಧರಿಸಿ ಕೌನ್ಸಿಲಿಂಗ್‌ಗೆ ಹಾಜರಾಗುವುದು.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

31/1/22,

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಹಾಗೂ ಅಂತರ್ ಘಟಕ (ವಿಭಾಗದ ಹೊರಗೆ) ವರ್ಗವಣಾ
ಸಕ್ಷಮ ಪ್ರಾಧಿಕಾರಿಗಳು.
ಆಯುಕ್ತರ ಕಛೇರಿ, ಬೆಂಗಳೂರು.

ಇವರುಗಳಿಗೆ,

1. ಅಪರಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
2. ಅಪರಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ.
3. ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ. ಬೆಳಗಾವಿ ವಿಭಾಗ.
4. ನಿರ್ದೇಶಕರು(ಇತರೆ ಪರೀಕ್ಷೆಗಳು) ಹಾಗೂ ವರ್ಗಾವಣೆ ಕೋಶ ಪ್ರಕ್ರಿಯೆ ನಿಯಂತ್ರಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು .
5. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ವೇಳಾಪಟ್ಟಿಯನ್ನು ತಮ್ಮ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಹಾಗೂ ಸಂಬಂಧಿಸಿದ ಶಿಕ್ಷಕರಿಗೆ ಮಾಹಿತಿಯನ್ನು ನೀಡುವುದು ಮತ್ತು ಕೌನ್ಸಿಲಿಂಗ್ ಕಾರ್ಯಕ್ಕೆ ಎಲ್ಲಾ ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳಲು ತಿಳಿಸಿದೆ.
6. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯಕ್ರಮಕ್ಕಾಗಿ.
7. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಘಟಕ, ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಕಳುಹಿಸುತ್ತಾ ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
8. ಕಛೇರಿ ಪ್ರತಿ.